## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 828 |
| 02. ಮಾನ್ಯ ಸದಸ್ಯರ ಹೆಸರು | : | ಶ್ರೀ ಎನ್.ರವಿಕುಮಾರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 03. ಉತ್ತರಿಸುವ ದಿನಾಂಕ | : | 22.02.2024 |
| 04. ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಎ.ಡಿ.ಜಿ.ಪಿ ಕೆಎಸ್‌ಆರ್‌ಪಿ, ಎ.ಡಿ.ಜಿ.ಪಿ ನೇಮಕಾತಿ ಮತ್ತು ಎ.ಡಿ.ಜಿ.ಪಿ ಆಡಳಿತ ಹಾಗೂ ಎ.ಸಿ.ಎಸ್ ಗೃಹಇಲಾಖೆಯವರನ್ನೊಳಗೊಂಡಂತೆ ಮಾನ್ಯ ಗೃಹ ಸಚಿವರ ನೇತೃತ್ವದಲ್ಲಿ ದಿನಾಂಕ: 22.03.2022ರಂದು ಐ.ಆರ್.ಬಿ ನೇಮಕಾತಿಯಲ್ಲಿ ನೇಮಕಾತಿ ಆದೇಶ ನೀಡಲು ಉಳಿದು ಹೋಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ನೀಡಲು ಅನುವಾಗುವಂತೆ ನಡೆದ ಸಭಾ ನಡವಳಿ: ಒಇ:42:ಪಿಪಿಎಸ್:2019, ದಿನಾಂಕ:31.05.2022ರ ಅನುಷ್ಠಾನದ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | 2012ನೇ ಸಾಲಿನಲ್ಲಿ ಕೆ.ಎಸ್.ಆರ್.ಪಿ., ಐ.ಆರ್.ಬಿ (750 ಹುದ್ದೆಗಳು) ಹಾಗೂ ಕೆ.ಎಸ್.ಐ.ಎಸ್.ಎಫ್. ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ ನೇಮಕಾತಿಯ ಅಧಿಸೂಚನೆಯನ್ನು ನೇಮಕಾತಿ ಕಛೇರಿಯಿಂದ ಏಕಕಾಲದಲ್ಲಿ ಹೊರಡಿಸಲಾಗಿರುತ್ತದೆ.<br>2012ನೇ ಸಾಲಿನಲ್ಲಿ ಐಆರ್‌ಬಿ, ಮುನಿರಾಬಾದ್ ಮತ್ತು ವಿಜಯಪುರ ಘಟಕಗಳ ವಿಶೇಷ.ಆರ್‌ಪಿಸಿ ಹುದ್ದೆಗೆ ನೇಮಕಾತಿ ಅಧಿಸೂಚನೆ ಹೊರಡಿಸಲಾಗಿದ್ದು, ಅದರನ್ವಯ, 2014ನೇ ಸಾಲಿನಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ತದನಂತರ, ನೇಮಕಾತಿ ಆದೇಶ ಹೊರಡಿಸಿದ ನಂತರ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಬಾಕಿ ಉಳಿದ ರಿಕ್ತ ಸ್ಥಾನಗಳಿಗೆ 2016, 2017, 2018 ಹಾಗೂ 2019ನೇ ಸಾಲಿನಲ್ಲಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ.<br>ಇಲಾಖೆಯ ಹಿತದೃಷ್ಟಿಯಿಂದ ಹಾಗೂ ದಿನಾಂಕ:09.01.2012ರ ಅಧಿಸೂಚನೆ ಸಂ:10:ನೇಮಕಾತಿ–4/ಡಿಐಜಿಪಿ/2011–12ರಲ್ಲಿನ ಎಲ್ಲಾ ಹುದ್ದೆಗಳು ಭರ್ತಿಯಾಗಲಿ ಎಂಬ ಸದುದ್ದೇಶದಿಂದ ನೇಮಕಾತಿ ಕಛೇರಿಯ ಆದೇಶದಂತೆ ಹೆಚ್ಚುವರಿಯಾಗಿ ಕರೆಕಳುಹಿಸಿದ 488 ಅಭ್ಯರ್ಥಿಗಳ ಪೈಕಿ ನೇಮಕಾತಿ ಆದೇಶ ಪಡೆದು 111 ಅಭ್ಯರ್ಥಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| | | 488 ಅಭ್ಯರ್ಥಿಗಳ ಪೈಕಿ ನೇಮಕಾತಿ ಆದೇಶ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ 111 ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅಭ್ಯರ್ಥಿಗಳಿಗೆ ಇಲಾಖೆಯ ಆಶಯ ಹಾಗೂ ಮಾನವೀಯ ನೆಲೆಯಲ್ಲಿ ಒಂದು ಬಾರಿಯ ಕ್ರಮವಾಗಿ ಎಲ್ಲಾ ಪರೀಕ್ಷೆಗಳಲ್ಲಿ ತೇರ್ಗಡೆಯಾದ, ಎಲ್ಲಾ ಮೂಲ ದಾಖಲೆಗಳು ಸಮರ್ಪಕವಾಗಿವೆ ಎಂದು ಕಂಡು ಬಂದಿರುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ, ನೇಮಕಾತಿ ಕಛೇರಿಯು ಈಗಾಗಲೇ ನೀಡಿರುವ ನಿರ್ದೇಶನದಂತೆ 488 ಅಭ್ಯರ್ಥಿಗಳಲ್ಲಿ 111 ಅಭ್ಯರ್ಥಿಗಳನ್ನು ನೇಮಕಾತಿಗೊಳಿಸಲು ಕೈಗೊಂಡ ಪ್ರಕ್ರಿಯೆಯನ್ನೇ ಮುಂದುವರೆಸಿ ಒಂದು ಬಾರಿಯ ಕ್ರಮವಾಗಿ ಬಾಕಿ ಉಳಿದಿರುವ ಅಭ್ಯರ್ಥಿಗಳಿಗೆ ಅಂತಿಮ ಅವಕಾಶವನ್ನು ನೀಡುವ ಬಗ್ಗೆ ನಿಯಾನುಸಾರ ಪರಿಶೀಲಿಸಿ, ಪ್ರಸ್ತಾವನೆಯನ್ನು ಸಲ್ಲಿಸುವಂತೆ ದಿನಾಂಕ:22.03.2022ರ ಸಭೆಯಲ್ಲಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರಿಗೆ ಸೂಚಿಸಲಾಗಿತ್ತು. ಈ ಬಗ್ಗೆ ವರದಿಯನ್ನು ನಿರೀಕ್ಷಿಸಲಾಗಿದೆ. |
| ಆ) | ಐ.ಆರ್.ಬಿ ನೇಮಕಾತಿಯಲ್ಲಿ ನೇಮಕಾತಿ ಆದೇಶ ನೀಡಲು ಉಳಿದು ಹೋಗಿರುವ ಅಭ್ಯರ್ಥಿಗಳಿಗೆ ನೇಮಕಾತಿ ನೀಡಲು ಯಾವ ಯಾವ ದಾಖಲೆಗಳನ್ನು ಸಂಗ್ರಹಿಸಲು ಬಾಕಿ ಇದೆ; (ವಿವರ ನೀಡುವುದು) | ದಾಖಲೆಗಳ ಪರಿಶೀಲನೆ ಪೂರ್ಣವಾಗಿದೆ. |
| ಇ) | ದಿನಾಂಕ:22.03.2022ರಂದು ನಡೆದ ಸಭೆಯಲ್ಲಿನ ನಿರ್ಣಯಗಳನ್ನು ಯಥಾವತ್ತಾಗಿ ಅನುಷ್ಠಾನಗೊಳಿಸುವ ಮೂಲಕ ನೊಂದ, ಬಡ, ರೈತ, ಕೂಲಿ ಕಾರ್ಮಿಕ ಹಿಂದುಳಿದ ಪರಿಶಿಷ್ಟ ಜಾತಿ (ಎಸ್.ಸಿ) ಹಾಗೂ ಪರಿಶಿಷ್ಟ ಪಂಗಡದ (ಎಸ್.ಟಿ) ಅಭ್ಯರ್ಥಿಗಳಿಗೆ ನೌಕರಿ ನೀಡುವ ಮೂಲಕ ಜೀವಿಸಲು ಅವಕಾಶ ಕಲ್ಪಿಸುವ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ದಿನಾಂಕ:22.03.2022ರ ಸಭೆಯ ನಿರ್ಣಯದನ್ವಯ ವರದಿ ನಿರೀಕ್ಷಿಸಲಾಗಿದೆ. |

**ಹೆಚ್‌ಡಿ/22/ಪಿಪಿಎಸ್/2024**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು